ಪಂಗಡಕ್ಕೆ ಸೇರಿದ 16 ಅಭ್ಯರ್ಥಿಗಳನ್ನು ಮತ್ತು ಸಾಮಾನ್ಯ ಮತ್ತು ಹಿಂದುಳಿದ ವರ್ಗಕ್ಕೆ ಸೇರಿದ 562 ಅಭ್ಯರ್ಥಿಗಳನ್ನು ನೇಮಿಸಲಾಗಿದೆ. ಪರಿಶಿಷ್ಟ ಜಾತಿ ಅಭ್ಯರ್ಥಿಗಳಿಗೆ ಮೀಸಲಿರಿಸಿರುವ 95 ಹುದ್ದೆಗಳು ಮತ್ತು ಪರಿಶಿಷ್ಟ ಪಂಗಡಕ್ಕೆ ಮೀಸಲಿರಿಸಿರುವ 21 ಹುದ್ದೆಗಳು ಸದರಿ ವರ್ಗಕ್ಕೆ ಸೇರಿದ ಅಭ್ಯರ್ಥಿಗಳ ಕೊರತೆಯಿಂದ ಖಾಲಿ ಉಳಿದಿವೆ.

4) ಸಾಮಾನ್ಯ ಮತ್ತು ಹಿಂದುಳಿದ ವರ್ಗಕ್ಕೆ ಮೀಸಲಿರಿಸಿದ್ದ 562 ಹುದ್ದೆಗಳನ್ನು ತುಂಬಲು ಎಲ್ಲಾ ಜಿಲ್ಲಾ ಪಂಚಾಯಿತಿಗಳಿಂದ ಸದರಿ ವರ್ಗಕ್ಕೆ ಸೇರಿದ ಅರ್ಹರಿರುವ ಒಟ್ಟು 665 ಅಭ್ಯರ್ಥಿಗಳ ಹೆಸರುಗಳನ್ನು ನೇಮಕಾತಿಗಾಗಿ ಶಿಫಾರಸ್ಸು ಮಾಡಲಾಗಿತ್ತು. ಆದುದರಿಂದ ಜೇಷ್ಠತೆಯು ಆಧಾರದ ಮೇಲೆ 562ಗ್ರಾಮ ಪಂಚಾಯಿತಿ ಕಾರ್ಯದರ್ಶಿಗಳ ಹುದ್ದೆಗೆ ಮಾತ್ರ ನೇಮಕಾತಿ ಮಾಡಲಾಯಿತು. ಇರಿಂದಾಗಿ ಸಾಮಾನ್ಯ ಮತ್ತು ಹಿಂದುಳಿದ ವರ್ಗಕ್ಕೆ ಸೇರಿದ ಸುಮಾರು 103 ಜನರು ನೇಮಕ ಹೊಂದಲು ಅರ್ಹರಿದ್ದರೂ ಸಹ ಹುದ್ದೆಗಳ ಕೊರತೆಯಿಂದ ಆಯ್ಕೆಯಾಗಿಲ್ಲ. ಸಾಮಾನ್ಯ ಮತ್ತು ಹಿಂದುಳಿದ ವರ್ಗಕ್ಕೆ ಮೀಸಲಿಟ್ಟಿರುವ "ಕೋಟಾ"ದಲ್ಲಿ ಹುದ್ದೆಗಳು ಖಾಲಿ ಬಿದ್ದಾಗ ಇವರುಗಳ ಪ್ರಕರಣಗಳನ್ನು ಪರಿಗಣಿಲಾಗುವುದು.

11.50 ಎ.ಎಂ.

ಕುಮಟಾದಲ್ಲಿ ದನಕರುಗಳು ಕಾಣೆಯಾಗುತ್ತಿರುವ ಬಗ್ಗೆ

ಡಾ. ಎಂ.ಪಿ. ಕರ್ಕಿ (ಕುಮಟಾ) : ಮಾನ್ಯ ಅಧ್ಯಕ್ಷರೇ, 1ನೇ ಏಪ್ರಿಲ್ 1995ರಂದು ಬೆಳಿಗ್ಗೆ ಕುಮಟಾದಲ್ಲಿ ಬೆಳಿಗ್ಗೆ ಮೇಯಲು ಬಿಟ್ಟ ಆಕಳು ಎತ್ತುಗಳನ್ನು ಕದ್ದು ಮಿನಿ ಟ್ರಕ್ಕುಗಳಲ್ಲಿ ಒಯ್ಯಲು ತಯಾರಾದ ಹಂತದಲ್ಲಿ ನಾಗರೀಕರು ಹಿಡಿದು ಪೋಲೀಸರಿಗೆ ಒಪ್ಪಿಸಿದರು. ಅದೇ ಸಂಜೆ ಸಿರ್ಸಿಯಿಂದ ಸಂಶಯಾಸ್ಪದ ರೀತಿಯಲ್ಲಿ ದನಕರುಗಳನ್ನು ಒಯ್ಯುತ್ತಿದ್ದ ಗ್ರಾಯಗಳಾಗಿದ್ದ ಇನ್ನೊಂದು ಮಿನಿಟ್ರಕ್ಕನ್ನು ನಾಗರೀಕರು ನಿಲ್ಲಿಸಿ ಪೋಲೀಸರಿಗೊಪ್ಪಿಸಿದರು. ಎರಡನೆಯ ಪ್ರಕರಣದಲ್ಲಿ ಪೋಲೀಸ್ ಇಲಾಖೆಯ ತನಿಖೆಯಲ್ಲಿ ಸರಿಯಾದ ನ್ಯಾಯ ದೊರಕುವುದು ಸಂಶಯಾಸ್ಪದವಾಗಿದೆ.

ಜಿಲ್ಲೆಯ ಅನೇಕ ಕಡೆಗಳಿಂದ ಮೇಯಲು ಬಿಟ್ಟ ದನಕರುಗಳು ಕಾಣೆಯಾಗಿರುವ ದೂರುಗಳು ಬರುತ್ತಿವೆ. ಈ ವಿಷಯದಲ್ಲಿ ಕೂಲಂಕುಷ ತನಿಖೆಯಾಗಿ ಈ ಜಾಲವನ್ನು ಬಯಲು ಮಾಡಿ ಸಂಬಂಧಪಟ್ಟವರನ್ನು ಶಿಕ್ಷಿಸಿ ಜನತೆಗೆ ಆಗುವ ತೊಂದರೆಯನ್ನು ನಿವಾರಿಸಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

+ಶ್ರೀ ಪಿ.ಜಿ.ಆರ್. ಸಿಂಧ್ಯಾ (ಮಾನ್ಯ ಗೃಹ ಸಚಿವರು) : ಮಾನ್ಯ ಉಪಾಧ್ಯಕ್ಷರೇ, ಶ್ರೀ ಗಣಪತಿ ಬೈರುಗೌಡ, ಹರವಟ್ಟ ಗ್ರಾಮ, ಕುಮಟಾ ತಾಲ್ಲೂಕು, ಇವರು ನೀಡಿದ ದೂರಿನಲ್ಲಿ ಅಪಾದಿತರಾದ ಅಕ್ಬರ್ ಕರೀಂ ಸಾಬ್ ಗುಜ್ಜಾರ ಗಲ್ಲಿ, ಕುಮಟಾ ವಾಸಿ ಹಾಗೂ ಗಣಪತಿ ಗೋವಿಂದ ದೇಶಭಂಡಾರಿ, ಕೊಡಕಣ ಗ್ರಾಮ ಕುಮಟಾ ತಾಲ್ಲೂಕು ವಾಸಿ ಇವರು ಆಕಳುಗಳನ್ನು ಅಪಹರಿಸಿ ಮೂರು ಎತ್ತುಗಳನ್ನು 407 ಟಿಂಪೋ ಸಂಖ್ಯೆ ಕೆಎ 20:6273ರಲ್ಲಿ ಭರ್ತಿ ಮಾಡಿದ ಬಗ್ಗೆ ನೀಡಿದ ದೂರಿನ ಅನ್ವಯ, ದಿನಾಂಕ 1.4.95ರಂದು 8.30 ಗಂಟೆಗೆ ಕುಮಟಾ ಪೋಲೀಸ್ ಠಾಣೆಯಲ್ಲಿ ಅಪರಾಧ ಮೊಕದ್ದಮೆ ಸಂಖ್ಯೆ 93:95, ಕಲಂ 379 ಭಾ.ದಂ.ಸಂ. ಜೊತೆಗೆ 11ಡಿ ಪ್ರಿವೆನ್ಷನ್ ಆಫ್ ಕ್ರೂಯಲ್ಟಿ ಟು ಎನಿಮಲ್ಸ್ ಆಕ್ಟ್ ಪ್ರಕಾರ ಸದರಿ ಅಪಾದಿತರ ವಿರುದ್ಧ ಮೊಕದ್ದಮೆ ದಾಖಲು ಮಾಡಲಾಗಿದೆ. ಸಾರ್ವಜನಿಕರು ನೆರದು ಈ ವ್ಯಕ್ತಿಗಳನ್ನು ಹಿಡಿದುಕೊಂಡು ಕುಮಟಾ ಪೋಲೀಸ್ ಠಾಣೆಗೆ ಕರೆತಂದು ಪೋಲೀಸರಿಗೆ ಒಪ್ಪಿಸಿ ದೂರು ನೀಡಿದ ಕಾರಣ ಮೊಕದ್ದಮೆ ದಾಖಲು ಮಾಡಿಕೊಂಡು ಅಪಾದಿತರನ್ನು ಬಂಧಿಸಲಾಗಿದೆ. ಮತ್ತು ಅವರನ್ನು ವಿಚಾರಣೆ ಮಾಡಿ ನಂತರ

ನ್ಯಾಯಾಲಯಕ್ಕೆ ಹಾಜರುಪಡಿಸಿದೆ. ಮತ್ತು ಅವರನ್ನು ದಿನಾಂಕ 3.4.95ರ ವರೆಗೆ ನ್ಯಾಯಾಲಯ ಅಭಿರಕ್ಷೆಗೆ ಒಳಪಡಿಸಲಾಗಿದೆ.

ಈ ಮೂರು ಎತ್ತುಗಳನ್ನು ನ್ಯಾಯಾಲಯದ ಆದೇಶದ ಪ್ರಕಾರ ಅವುಗಳ ಮಾಲೀಕರಿಗೆ ಒಪ್ಪಿಸಲಾಗಿದೆ. 1ನೆಯ ಆಪರಾಧಿಗೆ ಸೇರಿದ ವಾಹನವನ್ನು ವಶಪಡಿಸಿಕೊಳ್ಳಲಾಗಿದೆ. ತನಿಖೆಯನ್ನು ಮುಂದುವರೆಸಲಾಗಿದೆ.

ಅದೇ ದಿನ ಕಳವು ಮಾಡಿದ್ದರೆಂದು ಶಂಕಿಸಲಾದ ಆಕಳುಗಳನ್ನು ತುಂಬಿದ ಟೆಂಪೋ ಒಂದು ಸಿರಸಿಯಿಂದ ಕುಮಟಾಕ್ಕೆ ಬರುತ್ತಿರುವುದಾಗಿ ದೂರವಾಣಿಯ ಮೂಲಕ ಮಾಹಿತಿಯಂತೆ ಸ್ಥಳೀಯ ಪೋಲೀಸರು ವಾಹನವನ್ನು ತಡೆದು ಪೋಲೀಸ್ ಠಾಣೆಗೆ ತಂದು ವಾಹನ ಸಂಖ್ಯೆ ಕೆ ಎ 31:648 (407 ಟೆಂಪೋ) ಟೆಂಪೋದಲ್ಲಿದ್ದವರನ್ನು ಪ್ರಶ್ನಿಸಿ ಟೆಂಪೋದಲ್ಲಿದ್ದ 3 ಕೋಣ, 1 ಎತ್ತು ಮತ್ತು 4 ಹಸುಗಳನ್ನು ಸಾಗಣೆ ಮಾಡುತ್ತಿರುವ ಬಗ್ಗೆ ವಿಚಾರಿಸಿರುತ್ತಾರೆ. ಅವರು ಸದರಿ ಆಕಳುಗಳನ್ನು ಹೊಂದಿರುವ ಬಗ್ಗೆ ತೃಪ್ತಿಕರವಾದ ಉತ್ತರವನ್ನು ನೀಡಲು ವಿಫಲರಾಗಿದ್ದು ಮತ್ತು ವಾಹನದ ಬಗ್ಗೆ ಯಾವುದೇ ದಾಖಲೆಗಳನ್ನು ಹಾಜರು ಪಡಿಸದೆ ಸದರಿ ವಾಹನದಲ್ಲಿ ಪರವಾನಗಿ ಇಲ್ಲದೆ ಸಾಗಣೆ ಮಾಡಿದ ಬಗ್ಗೆ ಪಿಎಸ್ಐ (ಅಪರಾಧ) ಕುಮಟಾ ಪೋಲೀಸ್ ಠಾಣೆ ಇವರು ನಾಲ್ಕು ಜನ ಆಪಾದಿತರ ವಿರುದ್ಧ ಮೊಕದ್ದಮೆ ದಾಖಲಿಸಿಕೊಂಡು ಅವರನ್ನು ಪ್ರಶ್ನಿಸಿದ ನಂತರ ಮ್ಯಾಜಿಸ್ಟ್ರೇಟರ ಮುಂದೆ ಹಾಜರು ಪಡಿಸಿ ನಂತರ ನ್ಯಾಯಾಲಯದ ಜಾಮೀನಿನ ಮೇಲೆ ಬಿಡುಗಡೆ ಮಾಡಲಾಗಿದೆ. ಈ ಆಕಳುಗಳನ್ನು ಕುಮಾಟಾದ ವಾನಳ್ಳಿಯಲ್ಲಿನ ದೊಡ್ಡಿಯಲ್ಲಿ ಇರಿಸಲಾಗಿದೆ. ಸದರಿ ವಾಹನವನ್ನು ವಶಕ್ಕೆ ತೆಗೆದುಕೊಂಡು ನ್ಯಾಯಾಲಯದ ಆದೇಶದ ಪ್ರಕಾರ ಇಡಲಾಗಿದೆ. ಆಕಳುಗಳ ಮಾಲೀಕರನ್ನು ಗುರುತಿಸುವ ಬಗ್ಗೆ ತನಿಖೆಯನ್ನು ಮುಂದುವರೆಸಲಾಗಿದೆ. ಜಿಲ್ಲೆಯ ಹೆಚ್ಚಿನ ಭಾಗಗಳಲ್ಲಿ ಆಕಳು ಕಳುವಿನ ದೂರುಗಳು ಹೆಚ್ಚಿನ ಸಂಖ್ಯೆಯಲ್ಲಿ ವರದಿಯಾಗಿದೆ ಎಂಬುದು ಸರಿಯಲ್ಲ. ಜಿಲ್ಲೆಯಲ್ಲಿ ವರದಿಯಾದ ಆಕಳು ಕಳುವಿನ ಅಂಕಿಅಂಶಗಳು ಈ ಕೆಳಕಂಡಂತೆ ಇದೆ.

ವರ್ಷ	ವರದಿಯಾಗಿರುವುದು	ಪತ್ತೆ	ಆಪಾದಿತರು	ಹಂತ
1993	04	02	02	ವಿಚಾರಣೆಯಲ್ಲಿದೆ.
1994	03	03	04	ವಿಚಾರಣೆಯಲ್ಲಿದೆ
1995	02	02	06	ತನಿಖೆಯಲ್ಲಿದೆ.

ಇವುಗಳ ಹಿಂದೆ ವ್ಯವಸ್ಥಿತವಾದ ಗುಂಪು ಕಾರ್ಯಚರಣೆ ನಡೆಸುತ್ತಿದೆಯೋ ಇಲ್ಲವೋ ಎಂಬುದನ್ನು ಕಂಡು ಹಿಡಿಯಲು ತನಿಖೆ ಮುಂದುವರೆದಿದೆ.

ಗದಗ ಬೆಟಗೇರಿ ನೀರು, ಸರಬರಾಜು ವ್ಯವಸ್ಥೆಗೆ ವಿದ್ಯುತ್ ಸರಬರಾಜು.

ಶ್ರೀ ಡಿ.ಆರ್. ಪಾಟೀಲ್ (ಗದಗ) : ಮಾನ್ಯ ಅಧ್ಯಕ್ಷರೇ ಗದಗ ಬೆಟಿಗೇರಿ ನಗರಕ್ಕೆ ತೋರ್ಲಹಳ್ಳಿಯ ಹತ್ತಿರ ತುಂಗಭದ್ರಾ ನದಿಯಿಂದ ಕುಡಿಯುವ ನೀರು ಸರಬರಾಜು ಮಾಡುತ್ತಿದ್ದು ಕಳೆದ ಎರಡು ತಿಂಗಳಿಂದ ಅಲ್ಲಿರುವ ಪಂಪ್ಸೆಟ್‌ಗಳಿಗೆ ಸರಿಯಾಗಿ ವಿದ್ಯುತ್ ಸರಬರಾಜು ಆಗದೆ ನೀರು ಸರಬರಾಜಿನಲ್ಲಿ ಸಾಕಷ್ಟು ವ್ಯತ್ಯಯ ಆಗುತ್ತಿದೆ. ಇವನ್ನು ಸರಿಪಡಿಸುವ ದೃಷ್ಟಿಯಿಂದ ಇಂಧನಖಾತೆ ಸಚಿವರು ಕೆ.ಇ.ಬಿ.ಗೆ ಆದೇಶ ನೀಡಿ ಗದಗ ಬೆಟಗೇರಿ ನೀರು ಸರಬರಾಜು ವ್ಯವಸ್ಥೆಯಲ್ಲಿರುವ ಮೂರು